ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1864/2019

ಚಾಸಾ:4 ಪ್ರಾಸಾ:4

ದಿನಾಂಕ: 11.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸತೀಶ್ ಶೆಟ್ಟಿ |
| ತಂದೆಯ ಹೆಸರು | : | ಜಗನ್ನಾಥ ಶೆಟ್ಟಿ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ಕೃಷಿ |
| ವಾಸ ಸ್ಥಳ | : | ಬನ್ನಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ರಿಂದ 3 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ.

ಚೂರಿಯಿಂದ ಪ್ರಸನ್ನ ಶೆಟ್ಟಿರವರು ಚಾಸಾ-1 ರವರಿಗೆ ಹೊಡೆದಿದ್ದು, ಅವಾಚ್ಯವಾಗಿ ನಿಂಧಿಸಿ ಜಾಗವನ್ನು ಕೊಡುವುದಿಲ್ಲ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ. 1ನೇ ಆರೋಪಿ ರಾಡಿನಿಂದ ಹೊಡೆದು 2ನೇ ಆರೋಪಿ ಕೈಯಿಂದ ಹೊಡೆದು ದೂಡಿರುತ್ತಾರೆ. ಅವರೊಂದಿಗೆ ಮಮತಾರವರು ಇದ್ದು ಹಲ್ಲೆ ಮಾಡಿರುತ್ತಾರೆ. ಅವಾಚ್ಯವಾಗಿ ನಿಂಧಿಸಿ ಆಸ್ತಿಯಲ್ಲಿ ನಿಮಗೆ ಏನೂ ನೀಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಕಟ್ಟಡ ನಿರ್ಮಾಣ ಮಾಡುವ ಕಾರ್ಮಿಕರು, ಗುತ್ತಿಗೆದಾರರು ಇದ್ದರು. ಚಾಸಾ-1 ರವರ ಎಡಗೈಯಲ್ಲಿ ರಕ್ತಗಾಯವಾಗಿರುತ್ತದೆ. ಮಮತಾ ಶೆಟ್ಟಿರುವರು ಚಾಸಾ-1ರವರ ಜುಟ್ಟು ಹಿಡಿದು ಎಳೆದಾಡಿರುತ್ತಾರೆ. ಸದ್ರಿ ಘಟನೆ ಮಧ್ಯಾಹ್ನದ ವೇಳೆಯಲ್ಲಿ ಆಗಿರುತ್ತದೆ. ಪಂಚಾಯಿತಿಗಾಗಿ ಬಂದಂತಹ ಮಂಜುನಾಥ ಶೆಟ್ಟಿ ಮತ್ತು ಸತೀಶ್ ಶೆಟ್ಟಿರವರು ಇದ್ದರು. ಚಾಸಾ-1 ರವರನ್ನು ಅನಂತರ ಆಸ್ಪತ್ರೆಗೆ ದಾಖಲಿಸಿರುತ್ತೇವೆ.

ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ನಾನು ಮತ್ತು ಚಾಸಾ-5 ರವರು ಹಾಜರು ಇದ್ದು ಚಾಸಾ-2ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಮುಮಾ1 ರಿಂದ 4ನ್ನು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಕ್ರಮವನ್ನು ಬೆಳಗ್ಗೆ 10-30ರ ಸಮಯದಲ್ಲಿ ಜರುಗಿಸಿ ನಿಪಿ-4ನ್ನು ತೆಗೆದಿರುತ್ತಾರೆ. ಈ ವಿಚಾರವಾಗಿ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ನಿಪಿ-3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1 ರಿಂದ 4ನ್ನು ನೋಡಿ ಗುರುತಿಸಿರುತ್ತಾರೆ. ಎಲ್ಲಾ ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**